ಶ್ರೀ ಕಾಗೇರಿ ವಿಶ್ವೇಶ್ವರ ಹೆಗಡೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಈ ಬಗ್ಗೆ ತುಳು ಅಕಾಡೆಮಿಯಿಂದ ಪ್ರಸ್ತಾವನೆ ಬಂದಿದೆ.

ಆ) ಇದರ ಸಾಧಕ ಬಾಧಕಗಳು ಸರ್ಕಾರದ ಪರಿಶೀಲನೆಯಲ್ಲಿವೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

1153 ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಹೆಚ್ಚಿನ ಉದ್ಯೋಗಗಳನ್ನು ಒದಗಿಸಿಕೊಡುತ್ತಿರುವ ಶೀಘ್ರಲಿಪಿ ಮತ್ತು ಬೆರಳಚ್ಚು ಪಠ್ಯಕ್ರಮಗಳಲ್ಲಿ ಕಂಪ್ಯೂಟರ್ ಶಿಕ್ಷಣ ಮತ್ತಿತರ ಸೂಕ್ತ ತಂತ್ರಜ್ಞಾನವನ್ನು ಒಳಪಡಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು;

ಆ) ಸುಧಾರಿತ ಪಠ್ಯಕ್ರಮವನ್ನು ಜಾರಿಗೆ ತರಲಾಗಿದೆಯೇ; ಇಲ್ಲವಾದಲ್ಲಿ ಜಾರಿಗೊಳಿಸಲು ಕಾಲಮಿತಿಯನ್ನೇನಾದರು ನಿಗದಿಪಡಿಸಿದೆಯೇ;

ಶ್ರೀ ಕಾಗೇರಿ ವಿಶ್ವೇಶ್ವರ ಹೆಗಡೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ವಾಣಿಜ್ಯ ಶಾಲೆಗಳಲ್ಲಿ ಬೋಧಿಸುತ್ತಿರುವ ಶೀಘ್ರಲಿಪಿ ಮತ್ತು ಬೆರಳಚ್ಚು ಪಠ್ಯಕ್ರಮಗಳಲ್ಲಿ ಕಂಪ್ಯೂಟರ್ ಶಿಕ್ಷಣ ಮತ್ತಿತರ ಸೂಕ್ತ ತಂತ್ರಜ್ಞಾನ ಒಳಪಡಿಸಲು ಸಾಧ್ಯವಾಗುವುದಿಲ್ಲ. ಕಾರಣ ಹಾಲಿ ಬೋಧಿಸುತ್ತಿರುವ ಶೀಘ್ರಲಿಪಿ ಹಾಗೂ ಬೆರಳಚ್ಚು ವಿಷಯಗಳ ಜೊತೆಗೆ ಗಣಕಯಂತ್ರ ಶಿಕ್ಷಣವನ್ನು ಈ ಕೆಳಗಿನಂತೆ ಎರಡು ಹಂತಗಳಲ್ಲಿ ಬೋಧಿಸಲು ಪಠ್ಯಾವಳಿ ಅನುಮೋದಿಸಿ ಆದೇಶ ನೀಡಲಾಗಿದೆ.

1. Office Automotion {Basic Course-6 ತಿಂಗಳ ಅವಧಿಗೆ}

2. Graphic Designer Course {Advanced Course-6 ತಿಂಗಳ ಅವಧಿಗೆ}

ಆ) ಸುಧಾರಿತ ಪಠ್ಯ ಕ್ರಮದಂತೆ ಪಠ್ಯ ಪುಸ್ತಕವು ಮುದ್ರಣದ ಹಂತದಲ್ಲಿರುತ್ತದೆ. ಮುದ್ರಣ ಕಾರ್ಯ ಪೂರ್ಣಗೊಂಡ ನಂತರ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು.